5

# ದೇವರಿಂದ ಆಯ್ದುಕೊಳ್ಳಲ್ಪಟ್ಟದ್ದು

*"ಹೇಗಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು. ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು" (ಎಫೆಸ 1:4-6).*

ಪ್ರತಿಯೊಬ್ಬನೂ ಜ್ಞಾಪಿಸಿಕೊಳ್ಳಲ್ಪಡುವದನ್ನು ಬಯಸುತ್ತಾನೆ. ಬಹುಶಃ ಈ ಅಪೇಕ್ಷೆಯು ನಮ್ಮೆಲ್ಲರಲ್ಲಿ ಇರುವುದು. ನಮ್ಮ ಕೆಲವು ಪ್ರಸಿದ್ಧವಾದ ಸ್ಥಳಿಕ ವ್ಯಕ್ತಿಪಡಿಸುವಿಕೆಯಲ್ಲಿ ಈ ಅಪೇಕ್ಷೆಯು ಕಂಡುಬರುತ್ತದೆ. ಒಬ್ಬ ಪ್ರಿಯರಿಗೆ ನಾವು ಕಳುಹಿಸುವ ಜನ್ಮ ಶುಭಾಶಯ ಕೋರುವ ಜನ್ಮ ದಿನಾಚರಣೆಯ ಕಾರ್ಡಿನ ಮೇಲೆ, "ನಾನು ನಿನ್ನ ಬಗ್ಗೆ ಯೋಚಿಸುತ್ತಿರುತ್ತೇನೆ" ಎಂದು ಬರೆಯುತ್ತೇವೆ. ನಮಗೆ ಪ್ರಿಯ ವಾದ, ಅವರ ಅನ್ಯೋನ್ಯತೆಯು ನಮಗೆ ವಿಶೇಷವಾದದ್ದಾಗಿರುವ ಒಬ್ಬ ಸ್ನೇಹಿತನಿಗೆ ಟೆಲಿಫೋನಿನಲ್ಲಿ "ನಾನು ನಿನ್ನ ಬಗ್ಗೆ ಯೋಚಿಸುತ್ತಲಿರುವೆನು" ಎಂದು ಹೇಳುತ್ತೇವೆ. ವಿಶ್ರಾಂತಿ - ಕಾಲಕ್ಕಾಗಿ ಇಲ್ಲವೇ ಇನ್ನೊಂದು ಪ್ರಯಾಣಕ್ಕಾಗಿ ಬಿಟ್ಟು ಹೋಗುತ್ತಿರುವಾಗ ಮನೆಯವರಿಗೆ ವಂದನೆ ಹೇಳುವಾಗ, "ನಿಮ್ಮ ಬಗ್ಗೆ ನಾವು ಯೋಚಿಸುತ್ತಿರುವೆವು" ಎಂದು ಹೇಳುವೆವು. ಈ ಮೃದುವಾದ ವ್ಯಕ್ತಪಡಿಸುವಿಕೆಗಳು ಒಬ್ಬ ವ್ಯಕ್ತಿಯು ವಿಶೇಷವಾಗಿದ್ದಾನೆ, ಅವನು ಮರೆಯಲ್ಪಡುವದಿಲ್ಲ ಎಂಬುದನ್ನು ತಿಳಿಸುತ್ತವೆ. ಯಥಾರ್ಥವಾಗಿ ನಮಗೆ ಹೇಳಲ್ಪಡು ವಾಗ ಇಲ್ಲವೇ ಬರೆಯಲ್ಪಡುವಾಗ, ಈ ವ್ಯಕ್ತಪಡಿಸುವಿಕೆಗಳು ನಮ್ಮನ್ನು ತಟ್ಟುತ್ತವೆ ಮತ್ತು ನಮ್ಮನ್ನು ಪ್ರೋತ್ಸಾಹಿಸುತ್ತವೆ.

ನಮ್ಮ ಸ್ನೇಹಿತರೂ ನಮ್ಮ ಬಂಧುಗಳೂ ನಮ್ಮ ಬಗ್ಗೆ ಯೋಚಿಸುತ್ತಿರುವರು ಎಂಬದನ್ನು ಕೇಳುವುದು ನಮಗೆ ಅರ್ಥಗರ್ಭಿತವಾದದ್ದಾಗಿದ್ದರೆ, ತನ್ನ ದೃಷ್ಟಿಯಲ್ಲಿ ನಾವು ವಿಶೇಷವಾದವರಾಗಿದ್ದೇವೆಂದು ದೇವರು ಹೇಳುವದನ್ನು ಕೇಳುವುದು ಇನ್ನೂ ಎಷ್ಟೋ ಹೆಚ್ಚು ಅರ್ಥಗರ್ಭಿತವಾದದ್ದಾಗಿರುತ್ತದಲ್ಲವೇ! ನೀನು ಕ್ರಿಸ್ತನಲ್ಲಿ ಇದ್ದರೆ, ಇದನ್ನೇ ದೇವರು ನಿನಗೆ ಹೇಳಿರುವನು. ಎಫೆಸ 1:4-6ರಲ್ಲಿ ಕ್ರೈಸ್ತರು ದೇವರಿಂದ ಆಯ್ದುಕೊಳ್ಳ ಲ್ಪಟ್ಟವರು ಎಂದು ಪೌಲನು ಹೇಳಿದ್ದಾನೆ. ಕ್ರಿಸ್ತನಲ್ಲಿ ವಿಮೋಚಿಸಲ್ಪಟ್ಟ ಎಲ್ಲರೂ ದೇವರಿಂದ ಆಯ್ದುಕೊಳ್ಳಲ್ಪಟ್ಟವರು ಎಂದು ಪರಿಶುದ್ಧ ಬರಹಗಳು ಭರವಸೆ ಕೊಡುತ್ತವೆ! ಇದು ನಿನ್ನನ್ನು ಬಹಳವಾಗಿ ಪ್ರೋತ್ಸಾಹಿಸುವದಲ್ಲವೇ?

ಈ ವಾಕ್ಯವನ್ನು ಪೌಲನು ರಚಿಸಿದ ರೀತಿಯಿಂದ ಪರಿಶುದ್ಧಾತ್ಮನು ನಮಗಾಗಿ ದೇವರು ನಮ್ಮನ್ನು ಬಹಳ ಮಹತ್ವವುಳ್ಳವರನ್ನಾಗಿ, ಯಾವುದೇ ಭೂಲೋಕದ

ಗೌರವಕ್ಕಿಂತ ದೊಡ್ಡದಾಗಿ ಆಯ್ದುಕೊಂಡಿದ್ದಾನೆ ಎಂಬುದಕ್ಕೆ ಕಾರಣವಾಗಿದ್ದಾನೆಂದು ನಾವು ತಿಳಿಯುತ್ತೇವೆ. ಚಿಕ್ಕ ಆಸ್ಯದಲ್ಲಿರುವ ಎಫೆಸ ಸಭೆಗೆ ಪೌಲನು ಬರೆಯುತ್ತಿದ್ದನು. ಅವನ ಪತ್ರಿಕೆಯ ಮುಖ್ಯ ಪ್ರಸ್ತಾಪವನ್ನು "ಸಭೆ, ಕ್ರಿಸ್ತನ ದೇಹ" ಎಂದು ಸಂಕ್ಷೇಪಿಸಿ ಹೇಳಬಹುದು. ಪೌಲನು ಪತ್ರಿಕೆಯ ಪ್ರಾರಂಭದಲ್ಲಿ ಸಭೆಯು ದೇವರು ಆಯ್ದುಕೊಂಡವರಿಂದ ಮಾಡಲ್ಪಟ್ಟಿದೆ ಎಂದು ಬರೆದನು. ಅವರು ದೇವರಿಂದ ಆಯ್ಕೆಮಾಡಲ್ಪಟ್ಟವರು, ಆತನ ದೈವಿಕ ಆಶೀರ್ವಾದಗಳಿಗಾಗಿ ಆತನಿಂದ ಆಯ್ದುಕೊಳ್ಳಲ್ಪಟ್ಟವರು ಆಗಿದ್ದಾರೆ. ಈ ರೀತಿಯ ಆಯ್ಕೆಯನ್ನು "ಮೊದಲೇ ಆಯ್ಕೆ ಮಾಡಲ್ಪಟ್ಟವರು," ಮೊದಲು ತೀರ್ಮಾನಿಸಲ್ಪಟ್ಟವರು ಇಲ್ಲವೇ ಮುಂಚಿತವಾಗಿ ಆಯ್ಕೆಯಾದವರು ಎಂದು ಅವನು ಕರೆಯುತ್ತಾನೆ (ಎಫೆಸ 1:5).

ದೇವರು ನಮ್ಮನ್ನು ಆಯ್ಕೆಮಾಡುವ ಈ ಸಂಗತಿಯು ಕೆಲವು ಪ್ರಶ್ನೆಗಳನ್ನು ಎಬ್ಬಿಸುತ್ತದೆ ಅಲ್ಲವೇ? ಒಬ್ಬನು ರಕ್ಷಿಸಲ್ಪಡಲಿಕ್ಕೆ ಮತ್ತು ಇನ್ನೊಬ್ಬನು ತಪ್ಪಿಹೋಗಲಿಕ್ಕೆ ದೇವರು ಆಯ್ಕೆ ಮಾಡಿಕೊಳ್ಳುವನು ಎಂದು ಪೌಲನು ಹೇಳುತ್ತಿರುವನೋ? ದೇವರು ಒಬ್ಬನನ್ನು ಪರಲೋಕಕ್ಕಾಗಿ ಹಾಗೂ ಇನ್ನೊಬ್ಬನನ್ನು ನರಕಕ್ಕಾಗಿ ಆಯ್ಕೆಮಾಡಿಕೊಂಡರೆ, ಯೋಹಾನ 3:16ರಲ್ಲಿ ಯೇಸುವು ಹೇಳಿದಂತೆ, ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಗಾಗಿ ದೇವರಿಗೆ ಹೇಗೆ ವಿಶೇಷ ಪ್ರೀತಿಯು ಇರುವುದು?

ಈ ವಾಕ್ಯಭಾಗಕ್ಕೆ ಜಾಗರೂಕತೆಯಿಂದ ಗಮನಕೊಡೋಣ ಮತ್ತು ಈ ಚಿತ್ತಾಕರ್ಷಕವಾದ ಪೂರ್ವ ಸಂಕಲ್ಪದ ವಿಷಯಕ್ಕೆ ಇರುವ ನಮ್ಮ ಪ್ರಶ್ನೆಗಳಿಗೆ ಪೌಲನು ಉತ್ತರಕೊಡುವಂತೆ ಬಿಡೋಣ. ಎಫೆಸ 1:4-6ರಲ್ಲಿ, ದೇವರು ಪ್ರತಿಯೊಬ್ಬರನ್ನೂ ಹೇಗೆ ಪ್ರೀತಿಸುತ್ತಾನೆ, ಜಗದುತ್ಪತ್ತಿಗೆ ಮೊದಲು ನಮ್ಮ ಬಗ್ಗೆ ಆತನು ಹೇಗೆ ಯೋಚಿಸಿದನು ಮತ್ತು ಆಯ್ಕೆ ಮಾಡಲ್ಪಟ್ಟವರು ಇರುವಂತೆ ಆತನು ಹೇಗೆ ಆಯ್ಕೆಮಾಡಿಕೊಂಡನು ಎಂಬುದನ್ನು ನೋಡುತ್ತೇವೆ.

## ಆತನಲ್ಲಿ ಆಯ್ದುಕೊಂಡವನು

ಮೊದಲನೆಯದು, ದೇವರು "ನಮ್ಮನ್ನು *ಆತನಲ್ಲಿ* ಆಯ್ದುಕೊಂಡನು ..." ಎಂದು ಪೌಲನು ಹೇಳುತ್ತಾನೆ (ಎಫೆಸ 1:4; ಒತ್ತಿ ಹೇಳಿದ್ದು ನನ್ನದು). ಆತನ ಕುಮಾರನ ದೇಹವು ಮನುಷ್ಯನಿಗೆ ಆತನ ರಕ್ಷಣೆಯನ್ನು ಮತ್ತು ಆತನ ಇತರ ಆತ್ಮಿಕ ಆಶೀರ್ವಾದಗಳನ್ನು ಕೊಡಲು ದೇವರು ಆಯ್ದುಕೊಂಡ ಸ್ಥಳವಾಗಿದೆ. ಈ ದೇಹದೊಳಗೆ ಬಂದವರು ದೇವರಿಂದ ಆಯ್ಕೆಮಾಡಲ್ಪಟ್ಟವರಾಗಿದ್ದಾರೆ.

ಎಫೆಸ 1:4-6ರ ವಿಶಾಲವಾದ ಹಿನ್ನಲೆಯಲ್ಲಿ, 1:3-14 ಇಡೀ ಸ್ತುತಿಗೀತವು ಬೈಬಲಿನಲ್ಲಿ ಅತೀ ಉದ್ದವಾದ ವಾಕ್ಯ ಎಂದು ಹೇಳಲ್ಪಟ್ಟಿದ್ದರಲ್ಲಿ, ಪೌಲನು ಕ್ರಿಸ್ತನಲ್ಲಿ ದೇವರು ಇಟ್ಟಿರುವ ನಿರ್ದಿಷ್ಟವಾದ ಆಶೀರ್ವಾದಗಳನ್ನು ವಿವರಿಸುತ್ತಾನೆ. ದೇವರ ಮಕ್ಕಳಾಗಿ ಸ್ವೀಕಾರವನ್ನು (ವಚನ 5), ಕ್ಷಮಾಪಣೆಯನ್ನು (ವಚನ 7), ವಿಮೋಚನೆಯನ್ನು (ವಚನ 7), ಜ್ಞಾನವನ್ನು ಮತ್ತು ಅಂತರ್ ದೃಷ್ಟಿಯನ್ನು (ವಚನ 8), ಕ್ರಿಸ್ತನಲ್ಲಿ ಒಂದಾಗಿ ಕೂಡಿಸುವದನ್ನು (ವಚನ 10), ಮತ್ತು ಬಾಧ್ಯಸ್ಥಿಕೆಯನ್ನು (ವಚನ 11), ಮತ್ತು ಪರಿಶುದ್ಧಾತ್ಮನಿಂದ ಮುದ್ರೆ ಹೊಂದುವದನ್ನು (ವಚನ 13) ಅವನು ನಮೂದಿಸುತ್ತಾನೆ.

ದೇವರು, ಯುಗಗಳಿಲ್ಲದ ನಿತ್ಯತ್ವದ ಭೂತಕಾಲದಲ್ಲಿ, ಕ್ರಿಸ್ತನೊಳಗೆ ಬರುವವರು ಮತ್ತು ಕ್ರಿಸ್ತನ ಕೃಪೆಯ ವರಗಳನ್ನು ತಾವೇ ಲಭ್ಯಮಾಡಿಕೊಳ್ಳುವವರು, ಆತನ ಆಶೀರ್ವಾದ

ಗಳಿಗಾಗಿ ಮತ್ತು ಆತನ ರಕ್ಷಣೆಗಾಗಿ ಆಯಲ್ಪಟ್ಟಿರುವರೆಂದು ತೀರ್ಮಾನಿಸಿದನು. ಈ ರಕ್ಷಣೆಯ ಯೋಜನೆಯು ಪೂರ್ವದಲ್ಲಿ ಸಂಕಲ್ಪಿಸಲ್ಪಟ್ಟಿತ್ತು, ದೇವರಿಂದ ನಿತ್ಯತ್ವದ ಭೂತಕಾಲದಲ್ಲಿ ನಿರ್ಧರಿಸಲ್ಪಟ್ಟಿತ್ತು. ಆತನು ತನ್ನ ಆಯ್ಕೆಯಲ್ಲಿ ಚಂಚಲನಾಗಲೀ ಇಲ್ಲವೇ ಪಕ್ಷಪಾತಿಯಾಗಲೀ ಆಗಿರಲಿಲ್ಲ. ಒಬ್ಬ ವ್ಯಕ್ತಿಯು ತಪ್ಪಿಹೋಗುವದಕ್ಕಾಗಿ ಮತ್ತು ಇನ್ನೊಬ್ಬ ವ್ಯಕ್ತಿಯು ರಕ್ಷಿಸಲ್ಪಡುವದಕ್ಕಾಗಿ ಆತನು ಪೂರ್ವಸಂಕಲ್ಪ ಮಾಡಲಿಲ್ಲ, ಆದರೆ ಆತನ ಆತ್ಮಿಕ ದೇಹವಾದ, ಸಭೆಯನ್ನು ಪ್ರವೇಶಿಸುವದರಿಂದ ಕ್ರಿಸ್ತನ ರಕ್ಷಣೆಯನ್ನು ಸ್ವೀಕರಿಸುವವರನ್ನು ಮಾತ್ರವೇ ಆತನು ರಕ್ಷಿಸುವನೆಂದು ನಿರ್ಧರಿಸಿಕೊಂಡಿದ್ದನು.

"ಪೂರ್ವ ಸಂಕಲ್ಪ ಮಾಡು" ಎಂಬ ಪದದ ಅರ್ಥ "ಮೊದಲು ನಿರ್ಧರಿಸು" ಎಂದಾಗುತ್ತದೆ. "ಮುಂಚಿತವಾದ ಜ್ಞಾನ" ಎಂಬುದರ ಅರ್ಥ "ಮೊದಲು ತಿಳಿದಿರು" ಎಂದಾಗುತ್ತದೆ. ಬಹಶಃ ದೇವರು ಯಾರು ರಕ್ಷಿಸಲ್ಪಡುವರು ಮತ್ತು ಯಾರು ತಪ್ಪಿಹೋಗುವರು ಎಂಬುದನ್ನು ಮುಂಚಿತವಾಗಿ ತಿಳಿದಿರಬಹುದು, ಆದರೆ ಆತನು ಅವರ ವೈಯಕ್ತಿಕ ರಕ್ಷಣೆಯನ್ನು ಇಲ್ಲವೇ ಅವರ ವೈಯಕ್ತಿಕ ನಾಶನದ ಬಗ್ಗೆ ಪೂರ್ವ ಸಂಕಲ್ಪಮಾಡುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತನೊಳಗೆ ಬರುವದರ ಬಗ್ಗೆ ಯಾವುದನ್ನು ತೀರ್ಮಾನಿಸುವನೋ ಅದರಿಂದ ತಾನು ರಕ್ಷಿಸಲ್ಪಡುವನೋ ಇಲ್ಲವೋ ಎಂಬುದನ್ನು ಆಯ್ದುಕೊಳ್ಳುತ್ತಾನೆ.

ಈ ಎರಡು ವಿಷಯಗಳು, ಮುಂದಾಗಿ ತಿಳಿದುಕೊಳ್ಳುವುದು ಮತ್ತು ಮೊದಲೇ ಸಂಕಲ್ಪಮಾಡುವುದು, ಸಂಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ನಮಗೆ ಬಹಳ ಆಳವಾದವುಗಳಾಗಿರುತ್ತವೆ. ಕೆಲವೊಂದು ಮಟ್ಟದಲ್ಲಿ, ಅವುಗಳನ್ನು ಕುರಿತು ಬೈಬಲು ಹೇಳುವದನ್ನು ನಂಬಿಕೆಯಿಂದ ಸ್ವೀಕರಿಸಬೇಕಾಗುವುದು. ಪೂರ್ವ ಸಂಕಲ್ಪ ಮಾಡದೇ ದೇವರು ಮುಂದಾಗಿ ತಿಳಿಯ ಬಲ್ಲನು ಎಂಬುದನ್ನು ಬೈಬಲ್ ಅನ್ವಯಿಸುತ್ತದೆ. ದೇವರು ಮುಂದಾಗಿ ತಿಳಿಯುವಂಥದ್ದು ನಮ್ಮ ಜ್ಞಾಪಕಕ್ಕೆ ಹೋಲಿಸಲ್ಪಟ್ಟಿದೆ. ನಿನ್ನೆ ಏನು ಸಂಭವಿಸಿತೆಂಬುದನ್ನು ನಾವು ಜ್ಞಾಪಿಸಿಕೊಳ್ಳಬಹುದು ಆದರೆ ನಿನ್ನೆ ನಡೆದ ಘಟನೆಗಳನ್ನು ನಾವು ಜ್ಞಾಪಿಸಿಕೊಳ್ಳುವುದು ಅವುಗಳು ಸಂಭವಿಸುವದಕ್ಕೆ ಕಾರಣವಾಗುವದಿಲ್ಲ. ಒಂದು ರೀತಿಯಲ್ಲಿ ನಮ್ಮ ಸ್ಮರಣೆಗಳು ಸಮಯದಲ್ಲಿ ಹಿಂದೆ ಹೋಗುವಂತೆ, ಬಹುಶಃ ದೇವರು ಮುಂದಾಗಿ ತಿಳಿದುಕೊಳ್ಳುವಂಥದ್ದು ಸಮಯದಲ್ಲಿ ಮುಂದೆ ಹೋಗುತ್ತದೆ. ಹಿಂದಿನದನ್ನು ನಾವು ನಮ್ಮ ಜ್ಞಾಪಕದಲ್ಲಿ ನೋಡುವಂತೆ, ದೇವರು ತಾನು ಮುಂದಾಗಿ ತಿಳಿದುಕೊಳ್ಳುವಂಥದ್ದರಲ್ಲಿ ಭವಿಷ್ಯವನ್ನು ನೋಡಬಹುದು; ತನ್ನ ಸರ್ವ ಜ್ಞಾನದಲ್ಲಿ ಆತನು ಭವಿಷ್ಯವನ್ನು ನೋಡುವನು; ಆದರೆ ಆತನು ಅದನ್ನು ನೋಡುವುದು ಭವಿಷ್ಯದ ಘಟನೆಗಳು ಸಂಭವಿಸುವಂತೆ ಮಾಡುವದಿಲ್ಲ.

ಸ್ವತಂತ್ರ ನೈತಿಕ ಆಯ್ಕೆ ಮತ್ತು ಪೂರ್ವಸಂಕಲ್ಪ ಎರಡೂ ತತ್ವಗಳು ಹೊಸ ಒಡಂಬಡಿಕೆಯಲ್ಲಿ ಒಂದು ವಚನದಲ್ಲಿ, ಅಪೊಸ್ತಲರ ಕೃತ್ಯಗಳು 2:23ರಲ್ಲಿ ಕಂಡು ಬರುತ್ತವೆ. ಅವು ಒಂದೇ ವಚನದಲ್ಲಿ ಉಪಯೋಗಿಸಲ್ಪಟ್ಟಿವೆ ಮತ್ತು ಒಂದಕ್ಕೊಂದು ವಿರೋಧವಾಗಿರುವದಿಲ್ಲ. "ಆ ಯೇಸು ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್ ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ" (ಅಪೊಸ್ತಲರ ಕೃತ್ಯಗಳು 2:23) ಎಂದು ಪೇತ್ರನು ಹೇಳಿದನು. ದೇವರು ಯೇಸುವಿನ ಮರಣವನ್ನು ಮೊದಲೇ ತಿಳಿದಿದ್ದನು; ಆತನು ಮೊದಲೇ ಅದನ್ನು ತೀರ್ಮಾನಿಸಿಕೊಂಡಿದ್ದನು, ಇಲ್ಲವೇ ಅದರ ಪೂರ್ವಸಂಕಲ್ಪ ಮಾಡಿಕೊಂಡಿದ್ದನು. ಆದರೆ ಆತನು ಅದನ್ನು ಮಾಡಿದ ಅನ್ಯಜನರನ್ನು ಅದಕ್ಕೆ ಜವಾಬ್ದಾರರನ್ನಾಗಿ ಮಾಡಿದನು. ಮನುಷ್ಯನ ಸ್ವತಂತ್ರವಾದ ನೈತಿಕ ಆಯ್ಕೆಯು ಮತ್ತು ಭವಿಷದ್ ಜ್ಞಾನವು

ಹಾಗೂ ದೇವರಿಂದ ಪೂರ್ವ ಸಂಕಲ್ಪವು ಈ ಒಂದು ವಚನದಲ್ಲಿ ಕಂಡು ಬರುತ್ತವೆ, ಆದಾಗ್ಯೂ ಒಂದು ತತ್ವವು ಇನ್ನೊಂದು ತತ್ವವನ್ನು ರದ್ದುಪಡಿಸುವದಿಲ್ಲ.

ಜಗದುತ್ಪತ್ತಿಗಿಂತ ಮೊದಲು ದೇವರು ಕ್ರಿಸ್ತನಲ್ಲಿ ನಮ್ಮ ರಕ್ಷಣೆಯನ್ನು ಯೋಜಿಸಿದನು, ಇಲ್ಲವೇ ಪೂರ್ವಸಂಕಲ್ಪ ಮಾಡಿಕೊಂಡನು, ಆದರೆ ನಾವು ರಕ್ಷಿಸಲ್ಪಡಲು ರಕ್ಷಣೆಯ ಕ್ಷೇತ್ರದೊಳಗೆ, ಕ್ರಿಸ್ತನ ದೇಹದೊಳಗೆ ಬರುವದನ್ನು ನಾವು ಆಯ್ದುಕೊಳ್ಳ ತಕ್ಕದ್ದು. ದೇವರು ಆಯ್ದುಕೊಳ್ಳುವದರಲ್ಲಿ ಇರುವದನ್ನು ಯಾರಾದರೂ ಆಯ್ದುಕೊಳ್ಳ ಬಹುದು. "ತೀರ್ಮಾನಿಸಿಕೊಳ್ಳುವವರು ಆಯ್ಕೆಮಾಡಲ್ಪಟ್ಟವರಾಗಿರುವರು, ಮತ್ತು ತೀರ್ಮಾನಿಸಿಕೊಳ್ಳದೇ ಇರುವವರು ಆಯ್ಕೆ ಮಾಡಲ್ಪಟ್ಟವರಾಗಿರುವದಿಲ್ಲ" ಎಂದು ಯಾರೋ ಹೇಳಿದ್ದಾರೆ.

ನೀನು ದೇವರಿಂದ ಆಯ್ಕೆ ಮಾಡಲ್ಪಟ್ಟಿರುವಿಯೋ? ಆತನಿಂದ ನೀನು ಆಯ್ಕೆ ಮಾಡಲ್ಪಟ್ಟಿರುವಿ ಎಂದು ನೀನು ಹೇಗೆ ತಿಳಿಯಬಹುದು? ಪೌಲನ ಪ್ರಕಾರವಾಗಿ, ಉತ್ತರವು ಸರಳವಾಗಿದೆ: ನೀನು ಆತನಲ್ಲಿ ಇರುವಿಯೋ? ಕ್ರಿಸ್ತನಲ್ಲಿ ಇರುವವರು ತಾವು ಆಯ್ಕೆ ಮಾಡಲ್ಪಟ್ಟವರಲ್ಲಿ ಇರುವರೆಂದು ಆನಂದಪಡಬಹುದು. ಕ್ರಿಸ್ತನಲ್ಲಿ ನಾವು ದಿನಾಂಕವಿಲ್ಲದ ನಿತ್ಯವಾದ ಭೂತಕಾಲದಲ್ಲಿ ದೇವರು ಆಯ್ದುಕೊಂಡ ಇಲ್ಲವೇ ಪೂರ್ವ ಸಂಕಲ್ಪಮಾಡಿದ ಆಶೀರ್ವಾದದ ಸ್ಥಳದಲ್ಲಿ ನಾವಿರುತ್ತೇವೆ. ಭೂಲೋಕದಲ್ಲಿಯ ನಮ್ಮ ಸಮಯದಲ್ಲಿ ನಾವು ಕ್ರಿಸ್ತನಲ್ಲಿ ನಂಬಿಗಸ್ತಿಕೆಯಿಂದ ಜೀವಿಸಿದರೆ, ಪರಲೋಕವು ನಮ್ಮ ನಿತ್ಯ ಸ್ವಾಸ್ತ್ಯವಾಗಿರುವುದು.

## ನಿತ್ಯತ್ವದಿಂದ ಆಯ್ಕೆಮಾಡಲ್ಪಟ್ಟವರು

ಎರಡನೆಯದಾಗಿ, ದೇವರಿಂದ ಆಯ್ಕೆ ಮಾಡಲ್ಪಟ್ಟವರು, ಸಭೆಯು, ನಿತ್ಯತ್ವದಿಂದ ಆಯ್ಕೆ ಮಾಡಲ್ಪಟ್ಟಿದೆ, ಜಗದುತ್ಪತ್ತಿಗೆ ಮುಂಚಿತವಾಗಿ ಆಯ್ಕೆ ಮಾಡಲ್ಪಟ್ಟಿದೆ ಎಂದು ಪೌಲನು ಹೇಳಿದನು. ಅವನ ಮಾತುಗಳು, "... ನಮ್ಮನ್ನು ಜಗದುತ್ಪತ್ತಿಗೆ ಮುಂಚೆ *ಕ್ರಿಸ್ತನಲ್ಲಿ ಆರಿಸಿಕೊಂಡನು* ..." (ಎಫೆಸ 1:4; ಒತ್ತಿ ಹೇಳಿದ್ದು ನನ್ನದು) ಎಂದಿರುತ್ತವೆ.

ಪೌಲನು ಒಂದು ಬಹಳ ಮೂಲದ ಗ್ರೀಕ ಪದವನ್ನು ಉಪಯೋಗಿಸಿದನು, ಅದು NASBಯಲ್ಲಿ "ಅಸ್ತಿವಾರ" ಎಂದು ಭಾಷಾಂತರಿಸಲ್ಪಟ್ಟಿದೆ, ಅದು ನಿಜವಾಗಿಯೂ "ಪ್ರಾರಂಭದ ಪ್ರಾರಂಭಕ್ಕಿಂತ ಮೊದಲು" ಎಂದರ್ಥ ಕೊಡುತ್ತದೆ. ದೇವರು ಮೊದಲು ನಮ್ಮ ಬಗ್ಗೆ ಯೋಚಿಸಿದನು, ನಾವು ಪಾಪಮಾಡುವದಕ್ಕಿಂತ ಮೊದಲು ಪ್ರಾರಂಭವಿಲ್ಲದ ನಿತ್ಯತ್ವದ ಭೂತಕಾಲದಲ್ಲಿ, ನಾವು ಸೃಷ್ಟಿಸಲ್ಪಡುವದಕ್ಕಿಂತ ಮೊದಲು, ಮತ್ತು ಜಗತ್ತು ಉಂಟುಮಾಡುವದಕ್ಕಿಂತ ಮೊದಲು ನಮ್ಮನ್ನು ಆತನು ತನ್ನ ಮೀಸಲಾದ ಜನಾಂಗವಾಗಿ ಆಯ್ದುಕೊಂಡನು. ಆತನು ತನ್ನ ಪರಿಶುದ್ಧವಾದ ಮತ್ತು ಮಿತಿಯಿಲ್ಲದ ಮನಸ್ಸಿನಲ್ಲಿ, ಯೇಸುವಿನಲ್ಲಿ, ಶಿಲುಬೆಯ ಮೇಲೆ ಆತನ ಮರಣದಲ್ಲಿ, ಮತ್ತು ಕ್ರಿಸ್ತನ ಆತ್ಮಿಕ ದೇಹದಲ್ಲಿ, ಸಭೆಯಲ್ಲಿ ಕೇಂದ್ರೀಕರಿಸಲ್ಪಟ್ಟ ರಕ್ಷಣೆಯ ಯೋಜನೆಯನ್ನು ರೂಪಿಸುವದರಿಂದ ಆತನು ನಮ್ಮನ್ನು ತನ್ನ ಆಯ್ಕೆಯಾದ ಜನಾಂಗವಾಗಿ ಆರಿಸಿಕೊಂಡನು. ಈ ಅರ್ಥದಲ್ಲಿ, ಯೇಸುವನ್ನು ಜಗದ್ಪುತ್ತಿಗೆ ಮೊದಲು ವಧೆಮಾಡಲ್ಪಟ್ಟ ಕುರಿಮರಿಯಂತೆ ಮಾತಾಡಬಹುದು (ಪ್ರಕಟನೆ 13:8; 1 ಪೇತ್ರ 1:19, 20).

"ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವದಕ್ಕೆ ಮುಂಚೆ ನಿನ್ನನ್ನು ತಿಳಿದಿದ್ದೆನು; ನೀನು ಉದರದಿಂದ ಬರುವದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದ್ದೆನು; ಜನಾಂಗಗಳಿಗಾಗಿ ಪ್ರವಾದಿಯನ್ನಾಗಿ ನಿನ್ನನ್ನು ನೇಮಿಸಿದ್ದೇನೆ" (ಯೆರೆಮೀಯ 1:5) ಎಂದು ದೇವರು

ಯೆರೆಮೀಯನಿಗೆ ಹೇಳಿದನು. ತಾನು ತನ್ನ ತಾಯಿಯ ಗರ್ಭದಲ್ಲಿದ್ದಾಗಲೇ ತನ್ನನ್ನು ಪ್ರತ್ಯೇಕಿಸಿದನು ಎಂದು ಪೌಲನು ಹೇಳಿದನು (ಗಲಾತ್ಯ 1:15). ದೇವರು ಯೆರೆಮೀಯನ ಇಲ್ಲವೇ ಪೌಲನ ಸ್ವತಂತ್ರವಾದ ನೈತಿಕ ಆಯ್ಕೆಯನ್ನು ಅಲ್ಲಗಳೆಯಲಿಲ್ಲ, ಆದರೆ ಅವರು ಜನಿಸುವದಕ್ಕಿಂತ ಮೊದಲು ಅವರ ಮೇಲೆ ಆತನ ಮನಸ್ಸು ಇತ್ತು. ದೇವರು ತನ್ನ ಸೃಷ್ಟಿಯ ಸ್ವತಂತ್ರ ಆಯ್ಕೆಯೊಂದಿಗೆ ಅಡ್ಡ ಬಾರದೇ, ರೂಪಿಸಬಹುದು, ಯೋಜಿಸ ಬಹುದು ಮತ್ತು ಪೂರ್ವಸಂಕಲ್ಪಮಾಡಬಹುದು. ನಾವು *ಅರ್ಥಮಾಡಿಕೊಳ್ಳದಿರ ಬಹುದು,* ಆದರೆ ಅದರ ಮೇಲೆ *ನಿಲ್ಲಬಹುದು,* ಯಾಕಂದರೆ ದೇವರ ವಾಕ್ಯದ ಸ್ಪಷ್ಟವಾದ ಬೋಧನೆಯಿರುವದರಿಂದ.

ದೇವರಿಗೆ ಸಭೆಯು ಎಷ್ಟು ಮಹತ್ವವುಳ್ಳದ್ದಾಗಿದೆಯೆಂದು ತಿಳಿಯಲು ನೀವು ಬಯಸಿದರೆ, ಜಗದುತ್ಪತ್ತಿಗಿಂತ ಮೊದಲು ತಾನಾಯ್ದುಕೊಂಡ ಜನಾಂಗವಾಗಿ ಸಭೆಯನ್ನು ಆತನು ಆಯ್ದುಕೊಂಡದ್ದನ್ನು ಯೋಚಿಸಿರಿ. ಯಾವುದನ್ನೂ ಸೃಷ್ಟಿಸುವದಕ್ಕಿಂತ ಮೊದಲು ದೇವರು ಈ ಆಯ್ಕೆಯನ್ನು ಮಾಡಿಕೊಂಡನು. ಕೊಡಲ್ಪಟ್ಟ ಪರಿಸ್ಥಿತಿಯನ್ನು ಕುರಿತು ನಮ್ಮ ಪ್ರಾಧಾನ್ಯತೆಯನ್ನು ಯಾರಿಗಾದರೂ, "ಅದು ಸಂಭವಿಸಿದಾಗ, ಅದರ ಬಗ್ಗೆ ನಾನು ಯೋಚಿಸಿದೆನು ..." ಎಂದು ಹೇಳುವದರಿಂದ ಕೊಡುತ್ತೇವೆ. ಆ ಸಮಯದಲ್ಲಿ ನಮಗೆ ಅತೀ ಪ್ರಾಮುಖ್ಯವಾದದ್ದು ಯಾವುದು ಎಂದು ತಿಳಿಯುವಂಥದ್ದನ್ನು ಪ್ರಕಟಿಸುವ ವಿಧಾನವಿದಾಗಿದೆ. ದೇವರ ವಾಕ್ಯದ ಶೋಧಿಸುವ ಸಾಧನದಿಂದ, ಅದೇ ರೀತಿಯಿಂದ ಆತನ ಮನಸ್ಸಿನಲ್ಲಿ ಮೊದಲು ಯಾವುದು ಇತ್ತೆಂದು ನೋಡುವದರಿಂದ, ದೇವರಿಗೆ ಯಾವುದು ಮಹತ್ವದ್ದಾಗಿದೆ ಎಂಬುದನ್ನು ಕಂಡುಕೊಳ್ಳಬಹುದು: "ಆತನು ನಮ್ಮನ್ನು ತನ್ನಲ್ಲಿ ಜಗದುತ್ಪತ್ತಿಗೆ ಮೊದಲೇ ಆಯ್ದುಕೊಂಡನು" ಸಭೆಯು ಆತನು ಆಯ್ಕೆ ಮಾಡಲ್ಪಟ್ಟಂತೆ, ಆತನು ಆರಿಸಿಕೊಂಡ ಜನಾಂಗದಂತೆ, ಜಗದುತ್ಪತ್ತಿಗೆ ಮೊದಲು ದೇವರ ಮನಸ್ಸಿನಲ್ಲಿ ಇತ್ತು.

ಆಯ್ಕೆ ಮಾಡಲ್ಪಟ್ಟವರು ದೇವರಿಗೆ ಎಷ್ಟು ಪ್ರೀತಿಯುಳ್ಳವರಾಗಿದ್ದಾರೆ! ಸಮಯದ ಪ್ರಾರಂಭಕ್ಕಿಂತ ಮೊದಲಿನಿಂದಲೂ ದೇವರ ಮನಸ್ಸಿನಲ್ಲಿ ಅವರು ಇದ್ದರು. ಈ ಸತ್ಯವು ದೈವಿಕ ಪ್ರೋತ್ಸಾಹದೊಂದಿಗೆ ನಮ್ಮಲ್ಲಿರುವುದು ಮತ್ತು ನಮ್ಮನ್ನು ಬಲಪಡಿಸುವುದು.

## ಪರಿಶುದ್ಧತೆಗಾಗಿ ಆಯ್ಕೆಮಾಡಲ್ಪಟ್ಟವರು

ಮೂರನೆಯದಾಗಿ, ಪರಿಶುದ್ಧತೆಗಾಗಿ ನಾವು ಆಯ್ಕೆ ಮಾಡಲ್ಪಟ್ಟಿದ್ದೇವೆಂದು ಪೌಲನು ಹೇಳಿದನು. "... ನಾವು ಪ್ರೀತಿಯಲ್ಲಿ ನಡೆದು *ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು* ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು" (ಎಫೆಸ 1:4; ಒತ್ತಿ ಹೇಳಿದ್ದು ನನ್ನದು). ನಾವು ಒಂದು ಉದ್ದೇಶಕ್ಕಾಗಿ ಆಯ್ಕೆ ಮಾಡಲ್ಪಟ್ಟಿದ್ದೇವೆ.

ದೇವರು ಸಭೆಯನ್ನು ತನ್ನ ಜನಾಂಗವಾಗಿರಲು ಹಾಗೂ ತನ್ನ ಗುಣವನ್ನು ಇಲ್ಲವೇ ಹೋಲಿಕೆಯನ್ನು ಪ್ರತಿಬಿಂಬಿಸಲು ಆಯ್ಕೆ ಮಾಡಿಕೊಂಡನು. ಆತನ ಸಭೆಯು ಪರಿಶುದ್ಧ ವಾಗಿರಬೇಕೆಂದು ಆತನು ಪ್ರತಿಷ್ಠೆಪಡಿಸಿದನು. "ನಿಮ್ಮನ್ನು ಕರೆದಾತನು ಪರಿಶುದ್ಧ ನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ. ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರ ಬೇಕೆಂದು ಬರೆದದೆಯಲ್ಲಾ" (1 ಪೇತ್ರ 1:15, 16) ಎಂದು ಪೇತ್ರನು ಹೇಳಿದನು. ಪರಿಶುದ್ಧತೆ ಎಂದರೆ ಪಾಪದಿಂದ ತೊಳೆಯಲ್ಪಡುವುದು ಮತ್ತು ದೇವರ ಪರಿಶುದ್ಧ ಉಪಯೋಗಕ್ಕಾಗಿ ಪ್ರತ್ಯೇಕಿ

ಸಲ್ಪಡುವುದು ಎಂದರ್ಥವಾಗುತ್ತದೆ.

ದೇವರು ತನ್ನ ಜನರನ್ನು ದೋಷವಿಲ್ಲದವರಾಗಿರಲು ಆಯ್ದುಕೊಂಡಿದ್ದಾನೆ. ಈ ಪದದ ಅರ್ಥ, "ದೋಷವಿಲ್ಲದೇ" ಇಲ್ಲವೇ "ತಪ್ಪು ಇಲ್ಲದೇ" ಎಂದಾಗುತ್ತದೆ. ಇದು ದೇವರ ಜನರ ಗುರಿಯನ್ನು ಸೂಚಿಸುತ್ತದೆ. ದೇವರ ಮುಂದೆ ನಾವು ತಪ್ಪು ಇಲ್ಲದೆ ಜೀವಿಸಲು ಹೋರಾಡಬೇಕು. ಈ ಜೀವನದಲ್ಲಿ ನಾವು ಈ ಗುರಿಯನ್ನು ಎಂದೂ ಸಂಪೂರ್ಣವಾಗಿ ಸಾಧಿಸದಿದ್ದರೂ, ಇದು ನಮ್ಮ ಹೃದಯಗಳ ಸತತವಾದ ಮೊನೋ ಭಾವನೆಯಾಗಿರುತ್ತದೆ. ಪರಿಶುದ್ಧರಾಗಿರುವದಕ್ಕಾಗಿಯೂ, ದೋಷವಿಲ್ಲದವರಾಗಿಯೂ ಇರುವದಕ್ಕಾಗಿ ನಮ್ಮ ಪ್ರಯಾಸಗಳು ನಿತ್ಯತ್ವದಲ್ಲಿ ನಾವು ಆತನ ಸಿಂಹಾಸನದ ಮುಂದೆ ನಿಲ್ಲುವವರೆಗೆ ನೆರವೇರಿಸಲ್ಪಡಲಾರವು. ಕ್ರೈಸ್ತರು ತಮ್ಮ ಕರ್ತನ ನಿರ್ದೇಶನಗಳನ್ನು ಕೈಕೊಳ್ಳುವವರಾಗಿರುವದರಿಂದ, ಯಾವುದೇ ನಿಜವಾದ ದೋಷಾರೋಪಣೆಯು ಅವರಿಗೆ ವಿರುದ್ಧವಾಗಿ ತರಲ್ಪಡದಂತೆ ದೇವರ ಮುಂದೆ ಜೀವಿಸಲು ಹುಡುಕುವರು.

ದೇವರು, "ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು" (1:5) ಎಂದೂ ಪೌಲನು ಹೇಳಿದನು. ಆತನು ನಮ್ಮನ್ನು ತನ್ನ ಮಕ್ಕಳನ್ನಾಗಿ ಆಯ್ದುಕೊಂಡಿದ್ದಾನೆ. ಈ ಹಿನ್ನಲೆಯಲ್ಲಿ ಸ್ವೀಕರಿಸುವುದು ಎಂಬುದರ ಅರ್ಥ "ಎಲ್ಲಾ ಹಕ್ಕುಗಳನ್ನು, ಅವಕಾಶಗಳನ್ನು ಮತ್ತು ಪುತ್ರತ್ವದ ಜವಾಬ್ದಾರಿಕೆಯನ್ನು ಸ್ವೀಕರಿಸುವುದು" ಎಂದಾಗುತ್ತದೆ. ಸ್ವೀಕರಿಸಲ್ಪಡುವದರ ಗಳಿಗೆಯಲ್ಲಿ, ನಾವು ದೇವರ ಕುಟುಂಬದಲ್ಲಿ ಅನ್ವಯವಾಗುವ ಆ ಎಲ್ಲಾ ಪುತ್ರತ್ವವನ್ನು ಹೊಂದಿಕೊಳ್ಳುತ್ತೇವೆ. ದೇವರು - ಯೇಸುವಿನೊಳಗೆ ಬಂದವರನ್ನು ತಾನು ಸ್ವೀಕರಿಸಿಕೊಳ್ಳುವೆನೆಂದು ಮತ್ತು ಅವರಿಗೆ ತನ್ನ ದೈವಿಕ ಕುಟುಂಬದ ಎಲ್ಲಾ ಹಕ್ಕುಗಳನ್ನೂ, ಐಶ್ವರ್ಯಗಳನ್ನೂ ಮತ್ತು ಜವಾಬ್ದಾರಿಕೆಗಳನ್ನೂ ಕೊಡುತ್ತ ತನ್ನ ಮಕ್ಕಳನ್ನಾಗಿ ಮಾಡುವೆನೆಂದು - ಸಂಕಲ್ಪಿಸಿದನು, ಮುಂಚಿತವಾಗಿಯೇ ತೀರ್ಮಾನಿಸಿಕೊಂಡನು, ಪ್ರಾರಂಭವಿಲ್ಲದ ನಿತ್ಯತ್ವದ ಭೂತಕಾಲದಲ್ಲಿ ನಿರ್ಣಯಿಸಿಕೊಂಡನು.

ಒಂದು ರೇಡಿಯೋ ಸ್ಟೇಶನ್ನಿನಿಂದ ನೀವು ಕರೆಯಲ್ಪಟ್ಟಿರಿ ಮತ್ತು "ನೀವು ಆಯ್ಕೆ ಮಾಡಲ್ಪಟ್ಟಿದ್ದೀರಿ. ನಾವು ನಿಮ್ಮನ್ನು ಆರಿಸಿಕೊಂಡಿದ್ದೇವೆ" ಎಂದು ನಿಮಗೆ ಹೇಳಲ್ಪಡುತ್ತದೆ ಎಂದು ಊಹಿಸಿರಿ. "ಯಾವುದಕ್ಕಾಗಿ ಆಯ್ಕೆ ಮಾಡಲ್ಪಟ್ಟಿದ್ದೇವೆ?" ಎಂದು ನೀವು ಕೂಡಲೇ ಕೇಳುವಿರಿ. ಕರೆಯುತ್ತಿರುವವನು, "ನಾವು ನಿಮ್ಮನ್ನು ಆಯ್ಕೆ ಮಾಡಿಕೊಂಡಿದ್ದೇವೆ, ಆದರೆ ಯಾವುದಕ್ಕಾಗಿ ಎಂದು ನಿಮಗೆ ತಿಳಿದಿರುವದಿಲ್ಲ. ನಿಮ್ಮನ್ನು ಆಯ್ಕೆ ಮಾಡಿಕೊಂಡಾಗ ಮನಸ್ಸಿನಲ್ಲಿ ಯಾವುದೇ ವಿಶೇಷ ಸಂಗತಿಯಿರಲಿಲ್ಲ. ನೀವು ಆಯ್ಕೆ ಮಾಡಲ್ಪಟ್ಟವರು ಎಂಬುದನ್ನು ಮಾತ್ರ ನಾವು ಈಗ ನಿಮಗೆ ಹೇಳಬಲ್ಲೆವು. ನಮಗೆ ಬುಟ್ಟಿಯಲ್ಲಿ ಸಾವಿರಾರು ಹೆಸರುಗಳು ಇದ್ದವು, ಆಯ್ಕೆ ಮಾಡಿದಾಗ ನೀವು ಆಯಲ್ಪಟ್ಟಿರಿ. ನಿಮಗೆ ಶುಭಾಶಯಗಳನ್ನು ಹೇಳಲು ಕರೆಮಾಡಿದ್ದೇವೆ" ಎಂದು ಹೇಳುವನು. ಆಯ್ಕೆ ಮಾಡಲ್ಪಟ್ಟಿದ್ದೇನೆಂಬುದರ ಉದ್ವೇಗವು ಕೂಡಲೇ ಇಲ್ಲವಾಗಿ ಹೋಗುವುದು. "ನೀವು ಯಾವುದಕ್ಕಾಗಿ ಆಯ್ಕೆಯಾಗಿರುವಿರಿ ಎಂಬುದು ನಮಗೆ ಗೊತ್ತಿಲ್ಲ" ಎಂಬುದನ್ನು ಕೇಳಿದಾಗಲೇ ನಿರುತ್ಸಾಹಿಗಳಾಗುವಿರಿ. ಅದರ ಬಗ್ಗೆ ಆಯಲ್ಪಟ್ಟವರು ಇಲ್ಲವೇ ವಿಶೇಷವಾದವರು ಎಂದು ಭಾವಿಸುವುದೇ ಇಲ್ಲ. ಅದರ ಅರ್ಥದ ಗಲಿಬಿಲಿಯಲ್ಲಿ ಆಯ್ಕೆಯಾದದ್ದರ ಬಗ್ಗೆ ಚಕಿತಗೊಳ್ಳಲಾರಿರಿ.

ತನ್ನ ಆಯ್ಕೆಯ ಹಿಂದೆ ದೇವರಿಗೆ ಒಂದು ಉದ್ದೇಶವಿದೆ. ಕ್ರಿಸ್ತನಲ್ಲಿ ತನ್ನ ರಕ್ಷಣೆಯನ್ನು ಸ್ವೀಕರಿಸಲು ದೇವರು ನಮ್ಮನ್ನು ಆಯ್ದುಕೊಂಡನು. ತನ್ನ ಮಕ್ಕಳನ್ನಾಗಿ

ಸ್ವೀಕರಿಸಿಕೊಳ್ಳಲು, ಮತ್ತು ಈ ಲೋಕದಲ್ಲಿ ಆತನ ಸ್ವಂತ ಜನರಂತೆ ಪರಿಶುದ್ಧರೂ ದೋಷವಿಲ್ಲದವರೂ ಆಗಿ ಜೀವಿಸುವದಕ್ಕೆ ನಮ್ಮನ್ನು ಆತನು ಆಯ್ಕೆಮಾಡಿಕೊಂಡನು. ದೈವಿಕ ನಿಯೋಗದೊಂದಿಗೆ, ಆತನು ಕರೆದು ಪ್ರತ್ಯೇಕಿಸಲ್ಪಟ್ಟ ಜನಾಂಗದಂತೆ ಜೀವಿಸಲು ಆತನು ನಮ್ಮನ್ನು ಆಯ್ದುಕೊಂಡನು.

ದೇವರ ವಾಕ್ಯಕ್ಕೆ ಸತತವಾದ ಸಮರ್ಪಣೆಯಿಂದ ಪರಿಶುದ್ಧತೆಯೂ, ನಿರ್ದೋಷತ್ವವೂ ಕಾಪಾಡಲ್ಪಟ್ಟಿದೆ. ದೇವರ ಚಿತ್ತಕ್ಕೆ ವಿಧೇಯತೆಯ ಮೂಲಕ ಪರಿಶುದ್ಧತೆಗೆ ನಾವು ಕರೆಯಲ್ಪಟ್ಟಿದ್ದೇವೆ ಇಲ್ಲವೇ ಪ್ರತ್ಯೇಕಿಸಲ್ಪಟ್ಟಿದ್ದೇವೆ ಮತ್ತು ಆತನ ಚಿತ್ತದಲ್ಲಿ ನಮ್ಮ ಜೀವಿಸುವಿಕೆಯು ನಮ್ಮನ್ನು ಆತನಮುಂದೆ ತಪ್ಪಿಲ್ಲದವರನ್ನಾಗಿಯೂ ದೋಷವಿಲ್ಲದವರನ್ನಾಗಿಯೂ ಮಾಡುತ್ತದೆ. ನಮ್ಮ ಸಹೋದರ ಪೇತ್ರನ ಮಾತುಗಳನ್ನು ನಮ್ಮ ಹೃದಯಕ್ಕೆ ತೆಗೆದು ಕೊಳ್ಳೋಣ:

> ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವದಿಲ್ಲ. ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು (2 ಪೇತ್ರ 1:10, 11).

## ಕೃಪೆಯಿಂದ ಆಯ್ಕೆಮಾಡಲ್ಪಟ್ಟವರು

ನಾಲ್ಕನೆಯದಾಗಿ, ನಾವು ಕೃಪೆಯಿಂದ ಆಯ್ಕೆಮಾಡಲ್ಪಟ್ಟಿದ್ದೇವೆ. "ಆತನು ತನ್ನ ಕೃಪೆಯನ್ನು *ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸುಕ್ರಿಸ್ತನ ಮೂಲಕ* ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು" ಎಂದು ಪೌಲನು ಹೇಳಿದನು (ಎಫೆಸ 1:5, 6; ಒತ್ತಿ ಹೇಳಿದ್ದು ನನ್ನದು). ಈ ಆಯ್ಕೆಯು ದೇವರ ಒಳ್ಳೆಯತನದಿಂದ ಮತ್ತು ದಯೆಯಿಂದ ಪ್ರಾರಂಭಿಸಲ್ಪಟ್ಟು, ಮುಕ್ತಾಯಗೊಂಡಿತೆಂದು ಬೇರೆ ಮಾತುಗಳಲ್ಲಿ ಹೇಳಬಹುದು.

ಆತನ ಚಿತ್ತದ "ದಯೆಯುಳ್ಳ ಉದ್ದೇಶವು" ಯಾವುದು? ದೇವರ ಚಿತ್ತಕ್ಕೆ ಆಜ್ಞೆಗಳು, ನಿರ್ದೇಶನಗಳು ಮತ್ತು ವಿಧಿಗಳು ಇರುತ್ತವೆ. ಆತನ ಸಂಪೂರ್ಣ ಚಿತ್ತವು, ಅದರ ಎಲ್ಲಾ ವ್ಯಾಪ್ತಿ ಮತ್ತು ವಿಷಯಗಳಲ್ಲಿ ಮೂಲ ಉದ್ದೇಶವೂ, ಅಂತಿಮ ಪ್ರೇರಿಸುವಿಕೆಯೂ ಮತ್ತು ಕೃಪಾಪೂರ್ಣವಾದ ನಕ್ಷೆಯೂ ಇರುತ್ತದೆ. ಈ ಮೂಲ ಉದ್ದೇಶವು ಯಾವುದು? ಪಾಪದಿಂದ ರಕ್ಷಣೆ ಮತ್ತು ಹಾಗೂ ಆತನೊಂದಿಗೆ ಜೀವನ ಆಗಿರುವದಲ್ಲವೇ? ನಮಗಾಗಿ ಆತನು ಅತ್ಯುತ್ತಮವಾದದ್ದನ್ನು ಹುಡುಕುವನು ಎಂದು ಬೇರೆ ಮಾತಿನಲ್ಲಿ ಹೇಳಬಹುದು. ದೇವರು ಮಾಡಿದ್ದೆಲ್ಲವೂ, ಆತನು ತನ್ನ ದಯಾಭರಿತವಾದ ಆಸಕ್ತಿಯೊಂದಿಗೆ ನಮ್ಮ ನಿಜವಾದ ಒಳಿತಿಗಾಗಿ ಮಾಡಿದ್ದಾನೆ. "ಕರ್ತನು ... ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ" (2 ಪೇತ್ರ 3:9) ಎಂದು ಪೇತ್ರನು ಹೇಳಿದನು. "ಹಾಗೆ ಮಾಡುವದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಇದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ" (1 ತಿಮೊಥೆ 2:3, 4) ಎಂದು ಪೌಲನು ಬರೆದನು.

ಸಭೆಯ ಅಸ್ತಿತ್ವವು, ದೇವರ ಆಯ್ದುಕೊಂಡ ಜನಾಂಗದಂತೆ. "ಆತನ ಕೃಪೆಯ

ಮಹಿಮೆಯನ್ನು ಕೊಂಡಾಡುವದಕ್ಕೆ, ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು'' (ಎಫೆಸ 1:6). ದೇವರು ಸಭೆಯನ್ನು ಯೋಜಿಸಿದನು, ಸಭೆಯ ಬರೋಣವನ್ನು ಮುಂತಿಳಿಸಿದನು, ಸಭೆಯ ಅಸ್ತಿವಾರವನ್ನು ಹಾಕಲು ಯೇಸುವನ್ನು ಕಳುಹಿಸಿದನು, ಪಂಚಾಶತ್ತಮ ದಿನದಂದು ಅದ್ಭುತಕರವಾಗಿ ಸಭೆಯನ್ನು ಪ್ರಾರಂಭಿಸಿದನು, ದೈವಿಕ ನಡಿಸುವಿಕೆಯಿಂದ ಸುವಾರ್ತೆಯ ಪ್ರಸಂಗಿಸುವಿಕೆಗೆ ಮಾರ್ಗದರ್ಶನ ಮಾಡಿದನು - ಆದರೆ ಇದೆಲ್ಲವೂ ಜಗತ್ತಿನ ರಕ್ಷಣೆಗಾಗಿ ತನ್ನ ದಯೆಯುಳ್ಳ ಉದ್ದೇಶವನ್ನು ನೆರವೇರಿಸುವಂತೆ ಆಯಿತು. ಆತನ ದೈವಿಕ ಕಾರ್ಯದ ಪರಿಣಾಮವು, ಸಭೆಯ ಅಸ್ತಿತ್ವವು, ಆತನ ಕೃಪೆಯ ಮಹಿಮೆಯ ಸ್ತೋತ್ರಕ್ಕಾಗಿರುವುದು. ಏನೂ ಇಲ್ಲದ್ದರಿಂದ ಪ್ರಾರಂಭವಾಗಿ ಜಾಗತಿಕ ಮಟ್ಟದ ಸಂಘಟನೆಯಾದದ್ದರ ಬಗ್ಗೆ ಸಭೆಯು ತನ್ನನ್ನು ಹೊಗಳಿಕೊಳ್ಳ ಲಿಕ್ಕಾಗುವದಿಲ್ಲ. ದೇವರ ಕೃಪೆಯ ಉದ್ದೇಶದಲ್ಲಿ ಮತ್ತು ಕೃತ್ಯಗಳಲ್ಲಿ ಅದು ಮಹಿಮೆ ಹೊಂದಬಹುದು. ನಮ್ಮ ಮಹಿಮೆಯು ಆತನ ಕೃಪೆಯಾಗಿದೆ.

ನಿಮ್ಮ ಉತ್ತಮವಾದ ಆಸಕ್ತಿಗಳಿಗಾಗಿ ಸತತವಾಗಿ ಯಾರಾದರೂ ನಿನಗಾಗಿ ಹುಡುಕಿದವರನ್ನು ತಿಳಿದಿರುವಿಯೋ? "ನಾನು ಮೊದಲು," ಎಂದಲ್ಲ ಆದರೆ ಯಾವಾಗಲೂ "ನೀನು ಮೊದಲು"? ಎಂಬ ಭಾವನೆಯುಳ್ಳ ಯಾರಾನಾದರೂ ತಿಳಿದಿರುವಿರೋ? ಯಾರಾದರೂ ಪ್ರತಿಯೊಂದರಲ್ಲಿ ನಿನ್ನನ್ನು ಮೆಚ್ಚಿಕೊಂಡಿರುವರೋ? ಅತೀ ಹೆಚ್ಚು ಸ್ವಾರ್ಥರಹಿತನಾದ ಮತ್ತು ಉದಾರ ವ್ಯಕ್ತಿಯ ಸ್ವರೂಪವನ್ನು ನೀವು ತೆಗೆದುಕೊಂಡರೆ ಮತ್ತು ಆ ಸ್ವರೂಪವನ್ನು ಒಂದು ಮಿಲಿಯದಷ್ಟು ಪಟ್ಟು ಗುಣಿಸಿದರೆ, ದೇವರು ಯಾವುದರಂತಿರುವನು ಎಂಬ ಚಿತ್ರದ ಪ್ರಾರಂಭವು ಮಾತ್ರವೇ ನಿಮಗೆ ಇರುವುದು. ಆತನು ಮಾಡುವ ಪ್ರತಿಯೊಂದೂ ಆತನ ಪ್ರೀತಿಯ ದಯೆಯೊಂದಿಗೆ ಅನುಗುಣವಾಗಿ ಇರುವುದು.

ಆತನ ಕೃಪೆಗಾಗಿ ಕೃತಜ್ಞತೆಯೊಂದಿಗೆ, ಕ್ರಿಸ್ತನಲ್ಲಿ ನಮಗಿರುವ ರಕ್ಷಣೆಯಲ್ಲಿ, ಆತನು ನಮಗೆ ಕೊಟ್ಟ ನಿಯೋಗದಲ್ಲಿ, ಮತ್ತು ಭವಿಷ್ಯದಲ್ಲಿಯ ಅಂತ್ಯವಿಲ್ಲದ ನಿತ್ಯತ್ವದಲ್ಲಿ ದೇವರು ಆಯ್ಕೆಮಾಡಿಕೊಂಡವರಂತೆ ಆತನೊಂದಿಗೆ ನಮಗಿರುವ ಮಹಿಮೆಯುಳ್ಳ ಭವಿಷ್ಯದಲ್ಲಿ ನಾವು ಆನಂದಿಸುತ್ತೇವೆ. ಪ್ರತಿಯೊಬ್ಬ ಭಕ್ತನ ಹೃದಯವು ಸತತವಾಗಿ ದೇವರ ಸರಿಸಮಾನವಿಲ್ಲದ ಕೃಪೆಯ ಮುಖ್ಯ ಪ್ರಸ್ತಾಪದ ಸಂಗೀತವನ್ನು ಹಾಡುತ್ತಿರಬೇಕು. ದೇವರ ಆತೀ ಸಮೃದ್ಧವಾದ ಕೃಪೆಯು ನಮ್ಮಲ್ಲಿ ಕೃತಜ್ಞತೆಯನ್ನೂ, ಸ್ತೋತ್ರವನ್ನೂ, ನಂಬಿಕೆಯನ್ನೂ, ಮತ್ತು ವಿಧೇಯತೆಯನ್ನೂ ಉತ್ಪಾದಿಸಬೇಕು.

## ಮುಕ್ತಾಯ

ನಿಜವಾಗಿಯೂ, ಪೌಲನ ಲೇಖನಿಯ ಮೂಲಕ ಪರಿಶುದ್ಧಾತ್ಮನು ಸಭೆಯು ದೇವರ ಆಯ್ಕೆಯಾಗಿದೆಯೆಂದು ನಮಗೆ ಬೋಧಿಸಿದ್ದಾನೆ. ದೇವರು ತನ್ನಲ್ಲಿ ನಮ್ಮನ್ನು ಆಯ್ಕೆಮಾಡಿಕೊಂಡಿದ್ದಾನೆ, ನಮ್ಮನ್ನು ನಿತ್ಯತ್ವದಿಂದ ಆಯ್ದುಕೊಂಡಿದ್ದಾನೆ, ಪರಿಶುದ್ಧತೆಗಾಗಿ ನಮ್ಮನ್ನು ಆಯ್ದುಕೊಂಡಿದ್ದಾನೆ ಮತ್ತು ತನ್ನ ಕೃಪೆಯಿಂದ ನಮ್ಮನ್ನು ಆಯ್ದುಕೊಂಡಿದ್ದಾನೆ ಎಂದು ಅವನು ಹೇಳಿದ್ದಾನೆ. ನಾವು ಆತನ ಕಣ್ಣುಗುಡ್ಡೆಯಂತೆ ಇರುತ್ತೇವೆ. ಜಗತ್ತಿನ ಸೃಷ್ಟಿಯನ್ನು ಆತನು ಯೋಚಿಸಿದಂತೆ ನಾವು ಆತನ ಮೊದಲ ಯೋಚನೆಯಾಗಿದ್ದೆವು ಮತ್ತು ಈಗ ನಾವು ಮುಖ್ಯ ಯೋಚನೆಯಾಗಿದ್ದೇವೆ.

ಕ್ರಿಸ್ತನ ಹೊರಗೆ ಇರುವ ಯಾವನಾದರೂ, ಆಯ್ಕೆಮಾಡಲ್ಪಟ್ಟವರ ಕ್ಷೇತ್ರದಿಂದ ಹೊರಗೆ ಇರುವ ಯಾವನಾದರೂ ತಡವಿಲ್ಲದೆ ಆತನ ದೇಹವನ್ನು ಪ್ರವೇಶಿಸುವದನ್ನು

ಆಯ್ದುಕೊಳ್ಳಬೇಕು. ನಾನು ಹೈಸ್ಕೂಲಿನಲ್ಲಿದ್ದಾಗ, ಅತ್ಯುತ್ತಮವಾದ ವಿದ್ಯಾರ್ಥಿಗಳು ಶಾಲೆಯ ವರ್ಷದ "Who's Who"ದಲ್ಲಿ ಸೇರಿಸಲ್ಪಡಲು ಆಯ್ಕೆಮಾಡಲ್ಪಡುತ್ತಿದ್ದರು. ಕೆಲವರು ಮಾತ್ರವೇ ಆಯ್ಕೆ ಮಾಡಿಕೊಳ್ಳಲ್ಪಡುತ್ತಿದ್ದರು. ಆಯ್ಕೆಯು ವಿದ್ಯಾರ್ಥಿಗಳ ಪ್ರಸಿದ್ಧಿ, ವಿಶಿಷ್ಟ ತಲಾಂತು, ಅತ್ಯುತ್ತಮ ದಾಖಲೆಯ ಮೇಲೆ ಅವಲಂಭಿಸಿರುತ್ತಿತ್ತು. ದೇವರ "Who's Who," ಸಭೆಯಾಗಿರುತ್ತದೆ. ಆತನ "Who's Who" ಆದವರು ಮಧ್ಯದಲ್ಲಿ ಇರುವುದು ನಾವು ಮಾಡುವ ಆಯ್ಕೆಯಾಗಿದೆ, ದೇವರು ಮಾಡುವಂಥದ್ದಲ್ಲ. ನಮ್ಮ ನಂಬಿಕೆ ಮತ್ತು ಕ್ರಿಸ್ತನಿಗೆ ವಿಧೇಯತೆಯ ಮುಖಾಂತರ ಈ ಆಯ್ದುಕೊಂಡ ಗುಂಪಿನಲ್ಲಿ ಆತನು ನಮ್ಮನ್ನು ಇಡುತ್ತಾನೆ. ಆದರೆ ನಮ್ಮ ಪ್ರಸಿದ್ಧಿ, ತಲಾಂತು, ಇಲ್ಲವೇ ದಾಖಲೆಯ ಕಾರಣದಿಂದ ಇಡುವದಿಲ್ಲ. ತನ್ನ ಪ್ರಿಯನಾದ ಯೇಸು ಕ್ರಿಸ್ತನಲ್ಲಿ ನಮ್ಮ ಮೇಲೆ ಆತನು ದಯಪಾಲಿಸಿದ ಪ್ರೀತಿಯ ಕೃಪೆಯ ಮುಖಾಂತರ ದೇವರು ಆಯ್ಕೆಯಾಗದ ಎಲ್ಲರನ್ನೂ ಕ್ರಿಸ್ತನ ದೇಹವನ್ನು ಪ್ರವೇಶಿಸಲು ಮತ್ತು ಆಯ್ಕೆಯಾದವರಲ್ಲಿ ಒಬ್ಬರಾಗಲು, ರಕ್ಷಣೆಗಾಗಿ ಆಯ್ಕೆಯಾಗಲು, ಸಮೃದ್ಧಜೀವಿತ ಮತ್ತು ಪರಲೋಕದಲ್ಲಿ ನಿತ್ಯಜೀವ ಹೊಂದಲು ಆಮಂತ್ರಿಸುತ್ತಾನೆ.

ಆಯ್ಕೆಯಾದವರಲ್ಲಿ ಇರುವದನ್ನು ಆಯ್ಕೆಮಾಡಿಕೋ ಆಯ್ಕೆ ಮಾಡಲ್ಪಟ್ಟವರಲ್ಲಿ ಒಬ್ಬನಾಗಿರುವದನ್ನು ಆಯ್ಕೆ ಮಾಡಿಕೋ ದೇವರ ಪೂರ್ವ ಸಂಕಲ್ಪದಂತೆ ಆಯ್ಕೆಮಾಡಿಕೊಳ್ಳಲ್ಪಟ್ಟ ಮಕ್ಕಳಲ್ಲಿ ಒಬ್ಬನಾಗಿರುವದನ್ನು ತೀರ್ಮಾನಿಸಿಕೋ.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಕ್ರಿಸ್ತನ ದೇಹದ ಎಲ್ಲಾ ಸದಸ್ಯರು ದೇವರಿಂದ ಆಯ್ಕೆ ಮಾಡಲ್ಪಟ್ಟವರೆಂದು ನೀನು ಹೇಳಬಹುದೋ?
2. ಎಫೆಸ 1:4-6ರಲ್ಲಿ ಪೌಲನ ಪ್ರಕಾರವಾಗಿ ಯಾವ ಆತ್ಮಿಕ ಆಶೀರ್ವಾದಗಳು ಕ್ರಿಸ್ತನಲ್ಲಿ ಕಂಡುಬರುತ್ತವೆ?
3. ಒಂದು ಗುಂಪಿನ ಪೂರ್ವ ಸಂಕಲ್ಪದ ಮತ್ತು ಒಬ್ಬ ವ್ಯಕ್ತಿಯ ಪೂರ್ವಸಂಕಲ್ಪದ ಮಧ್ಯದಲ್ಲಿ ಯಾವ ಭಿನ್ನತೆ ಇದೆ.
4. "ಪೂರ್ವ ಸಂಕಲ್ಪ" ಎಂಬ ಪದದ ಅರ್ಥವೇನು?
5. "ಮುಂತಿಳಿಸುವಿಕೆ" ಮತ್ತು "ಪೂರ್ವಸಂಕಲ್ಪ" ಇವುಗಳ ಅರ್ಥದಲ್ಲಿ ಯಾವ ಭಿನ್ನತೆ ಇರುತ್ತದೆ?
6. ನಾವು ದೇವರಿಂದ ಆಯ್ಕೆ ಮಾಡಲ್ಪಟ್ಟವರು ಎಂದು ನಾವು ಹೇಗೆ ತಿಳಿದುಕೊಳ್ಳುವೆವು?
7. ದೇವರು ತನ್ನಲ್ಲಿ ನಮ್ಮನ್ನು ಯಾವಾಗ ಆಯ್ದುಕೊಂಡನು?
8. ನಾವು ಏನನ್ನು ಮಾಡಲು ಇಲ್ಲವೇ ಏನಾಗಿರಲು ದೇವರು ಆಯ್ದುಕೊಂಡನು?
9. "ಪರಿಶುದ್ಧತೆ" ಎಂಬ ಪದವನ್ನು ವಿವರಿಸಿರಿ.
10. "ಕೃಪೆಯಿಂದ ಆಯ್ಕೆ ಮಾಡಲ್ಪಡುವುದು" ಎಂಬ ಮಾತುಗಳ ಅರ್ಥವೇನು?
11. "ದೇವರಿಂದ ಆಯ್ಕೆ ಮಾಡಲ್ಪಡುವುದು" ಎಂಬ ಮಾತುಗಳ ಅರ್ಥವೇನು?
12. ದೇವರು ಆಯ್ಕೆಮಾಡಿಕೊಂಡವರಲ್ಲಿ ನಾವು ಒಬ್ಬರು ಹೇಗೆ ಆಗುತ್ತೇವೆ?

© 2009 Truth for Today